ಗ್ರಾನೈಟ್ ಕಲ್ಲಿನ ಲಭ್ಯತೆಯನ್ನು ಗಣಿ ಮಂತ್ರಿ ಭೂ ವಿಜ್ಞಾನ ಇಲಾಖೆಯು ಅಂದಾಜು ಮಾಡಿಲ್ಲ.

ಇ) ಮೆಸರ್ಸ್ ವಂದ್ದಕ್ಕನಹಳ್ಳಿ ಸ್ಟೋನ್ ಕಟ್ಟರ್ಸ್ ಕೋ-ಆಪರೇಟಿವ್ ಸೊಸೈಟಿಗೆ ಮಾತ್ರ ಗ್ರಾನೈಟಿಗಾಗಿ ಕ್ವಾರಿ ಲೈಸೆನ್ಸ್‌ನ್ನು ಕೊಡಲಾಗಿದೆ.

ಈ) ಕರ್ನಾಟಕ ಸಣ್ಣ ಖನಿಜ ರಿಯಾಯಿತಿ ನಿಯಮಗಳಲ್ಲಿ ನಿಗದಿಪಡಿಸಿರುವ ಕರಾರು ಮಂತ್ರು ಷರತ್ತುಗಳ ಒಳಪಟ್ಟು ಕ್ವಾರಿ ಗುತ್ತಿಗೆಗಳನ್ನು ನೀಡಲಾಗುತ್ತದೆ.

ರಾಜ್ಯದ ಅರಣ್ಯ ಸಂಪತ್ತಿನ ಬಗ್ಗೆ

೮೧೧. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ),—ಮಾನ್ಯ ಅರಣ್ಯ, ಗಣಿ ಮಂತ್ರಿ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿಯ ಅರಣ್ಯ ಪ್ರದೇಶದ ಒಟ್ಟು ಕ್ಷೇತ್ರವೆಷ್ಟು ? ಅದರಲ್ಲಿ ಸಾಮಾಜಿಕ ಅರಣ್ಯ ಪ್ರದೇಶವೆಷ್ಟು ?

ಆ) ೧೯೫೦ರಲ್ಲಿ, ಸಹ್ಯಾದ್ರಿ ಘಟ್ಟದ ಪಶ್ಚಿಮ ಘಟ್ಟದ ಹಾಗೂ ಉಳಿದ ಪ್ರದೇಶಗಳಲ್ಲಿಯ ಅರಣ್ಯ ಪ್ರದೇಶಗಳ ವಿಸ್ತಾರ ಎಷ್ಟು ?

ಇ) ಇದರಂತೆ ೧೯೬೦, ೧೯೭೦, ೧೯೮೦ ಮತ್ತು ೧೯೮೫-೮೬ರ ವರೆಗೆ ಅರಣ್ಯ ಪ್ರದೇಶದ ವಿಸ್ತಾರ ಎಷ್ಟು ?

ಈ) ಮೇಲೆ ತಿಳಿಸಿದ ರಾಜ್ಯದ ಎರಡು ಪ್ರದೇಶಗಳಿಂದ ವಿವಿಧ ಜಾತಿವಾರು ಕಟ್ಟಿಗೆ ಬಾಬೂ (ಡವಗೆ) ಮೇದಾರಿಗಳ ಉತ್ಪಾದನೆಯ ಭೂ ಕ್ಷೇತ್ರ, ಉತ್ಪಾದಿಸಿದ ಪ್ರಮಾಣ ಹಾಗೂ ಅವುಗಳಿಂದ ಸರ್ಕಾರದ, ಆದಾಯದ ಮೊತ್ತ ೧೯೫೦, ೧೯೬೦, ೧೯೭೦, ೧೯೮೦, ೧೯೮೫-೮೬ರಲ್ಲಿಯ ಪ್ರತ್ಯೇಕವಾಗಿ ಮೂರು ವರ್ಷಗಳ ಮಾಹಿತಿಗಳನ್ನು ವಿವರವಾಗಿ ನೀಡುವುದು.

ಉ) ರಾಜ್ಯದಲ್ಲಿ ಅರಣ್ಯ ಸಂಪತ್ತನ್ನು ಅಭಿವೃದ್ಧಿಪಡಿಸಿ ಸರ್ಕಾರದ ಮೂಲ ಆದಾಯ ಹೆಚ್ಚಿಸಲು ಸರ್ಕಾರದವರು ಯಾವ ಯೋಜನೆಗಳನ್ನು ಕೈಗೊಳ್ಳುತ್ತಿರುವುದು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮಂತ್ರು ಭೂ ವಿಜ್ಞಾನ ಮಂತ್ರಿಗಳು).—

ಅ) ೧. ಅರಣ್ಯ ಪ್ರದೇಶದ ಒಟ್ಟು ಕ್ಷೇತ್ರ ೩೮,೬೪,೪೨೪ ಹೆಕ್ಟೇರುಗಳು

ಅದರಲ್ಲಿ

೨. ಸಾಮಾಜಿಕ ಅರಣ್ಯ ಪ್ರದೇಶ ಒಟ್ಟು ಕ್ಷೇತ್ರ ೨೨,೮೫೩ ಹೆಕ್ಟೇರುಗಳು

ಆ) ೧೬,೯೬,೭೨೩ ಹೆಕ್ಟೇರುಗಳು.

ಇ)

೧೯೬೦	...	೩೫,೧೫,೯೩೭.೩ ಹೆಕ್ಟೇರು
೧೯೭೦	...	೩೭,೩೨,೩೬೦ ಹೆಕ್ಟೇರುಗಳು
೧೯೮೦	...	೩೮ ೩೨,೪೦೬ ಹೆಕ್ಟೇರು
೧೯೮೫-೮೬	...	೩೮,೬೪,೪೨೪ ಹೆಕ್ಟೇರು

ಈ) ೧೯೬೦, ೧೯೭೦, ೧೯೮೦ ಮತ್ತು ೧೯೮೫-೮೬ನೇ ಸಾಲಿಗೆ ಸಂಬಂಧಿಸಿದ ವಿವರ ಮಾಹಿತಿಗಳನ್ನು ಯಾದಿಯಲ್ಲಿ ಲಗತ್ತಿಸಲಾಗಿದೆ. ೧೯೫೦ನೇ ಸಾಲಿನ ಮಾಹಿತಿಗಳು ಲಭ್ಯವಿರುವುದಿಲ್ಲ

ಉ) ರಾಜ್ಯದಲ್ಲಿಯ ಅರಣ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರದವರು ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಸುಮಾರು ೪೨,೦೦೦ ಹೆಕ್ಟೇರು ಪ್ರದೇಶಗಳಲ್ಲಿ ವಿವಿಧ ಯೋಜನೆಯ ಅಡಿಯಲ್ಲಿ ಹಲವು ಜಾತಿಯ ಮರಗಳ ನೆಡುತೋಪುಗಳನ್ನು ಬೆಳೆಸಲು ಕ್ರಮ ಕೈಗೊಂಡಿದ್ದಾರೆ. ಇದಲ್ಲದೇ ಸಂಪೂರ್ಣವಾಗಿ ಮರಗಿಡಗಳನ್ನು ಕಡಿತಲೆ (ಕ್ಲಿಯರ್ ಫೆಲಿಂಗ್) ಮಾಡುವುದನ್ನು ನಿಲ್ಲಿಸಲಾಗಿದೆ.

ರಾಜ್ಯದ ಅರಣ್ಯ ಪ್ರದೇಶದಿಂದ ಕಟ್ಟಿಗೆ ಮತ್ತು ಬೊಂಬು ಇವುಗಳ ಉತ್ಪನ್ನ ಮತ್ತು ಅವುಗಳಿಂದ ಸರ್ಕಾರಕ್ಕೆ ಬಂದ ಆದಾಯ

1960–61

ಉತ್ಪನ್ನ

೧.	ತೇಗು	...	೪೦,೯೬೨.೩೩೮ ಘನ ಮೀಟರ್
	ಇತರ ಜಾತಿಯ ಕಟ್ಟಿಗೆ	...	೧,೦೨,೪೧೯.೨೨೦ ಘನ ಮೀಟರ್
	ತೇಗಿನ ಕಂಬಗಳು	...	೬೩,೧೨೪ ಸಂಖ್ಯೆ
	ಇತರ ಕಂಬಗಳು	...	೧೭,೦೯೮ ಸಂಖ್ಯೆ
	ಸ್ಲೀಪರ್	...	೯,೫೩೩,೨೬೫ ಸಂಖ್ಯೆ
೬.	ಸ್ಪೆಶಲ್ ತರಗತಿಯ ಸ್ಲೀಪರ್‌ಗಳು		೫.೭೬೮.೦೦೦ ಘನ ಮೀಟರ್
೭.	ಉರುವಲು ಕಟ್ಟಿಗೆ	...	೯೬,೯೮೫ ಘನ ಮೀಟರ್
೮.	ಇದ್ದಲ್ಲಿ	...	೨,೧೯೦ ಚೀಲಗಳು
೯.	ನೀಲಗಿರಿ ಕಂಬಗಳು	...	೧೪೪,೫೮೩ ಘನ ಮೀಟರು
೧೦.	ಬೊಂಬು	...	೨೨,೫೨,೪೫೦ ಸಂಖ್ಯೆ

ಆದಾಯ ಮೊತ್ತ

			ರೂ.
೧.	ಕಟ್ಟಿಗೆ	...	೪,೪೧.೩೫,೬೦೭–೦೦
೨.	ಉರುವಲು ಕಟ್ಟಿಗೆ	...	೫೧,೪೨,೪೩೨–೨೦
೩.	ಬೊಂಬು	...	೧೨,೬೨,೨೪೧–೦೦
೪.	ಉರುವಲು ಕಟ್ಟಿಗೆಯನ್ನು ಉದ್ಯಮಗಳಿಗೆ ಪೂರೈಸಿದ್ದರಿಂದ ಬಂದ ರಕಮು	...	೨೩,೧೨,೯೧೧–೮೦

1970–71

ಉತ್ಪನ್ನ

೧.	ತೇಗಿನ ಮರ	...	೫೧.೮೫೭–೦೦೦ ಘನ ಮೀಟರ್
೨.	ಇತರ ಜಾತಿಯ ಮರ	...	೧,೩೩,೮೧೭–೦೦೦ ಘನ ಮೀಟರ್
೩.	ತೇಗಿನ ಕಂಬಗಳು	...	೩,೬೪,೯೦೫ ಸಂಖ್ಯೆ
೪.	ಇತರ ಜಾತಿಯ ಕಂಬಗಳು	...	೩೯,೩೯೭ ಸಂಖ್ಯೆ
೫.	ಸ್ಲೀಪರ್‌ಗಳು	...	೩.೩೬,೧೧೧ ಸಂಖ್ಯೆ
೬.	ಉರುವಲು ಕಟ್ಟಿಗೆ	...	೫೨,೭೪೪ ಘನ ಮೀಟರ್
೭.	ದೊಡ್ಡ ಬಿದಿರು	...	೨,೫೨,೯೫೫,೭೫೫ ಸಂಖ್ಯೆ
೮.	ಸಣ್ಣ ಬಿದಿರು	...	೪೭,೫೧,೧೯೮ ಸಂಖ್ಯೆ

ಆದಾಯ ಮೊತ್ತ

			ರೂ.
೧.	ಕಟ್ಟಿಗೆ	...	೯,೫೩,೬೯,೭೯೧–೦೦
೨.	ಉರುವಲು ಕಟ್ಟಿಗೆ	...	೯೬,೨೫,೯೧೪–೦೦
೩.	ಬಿದಿರು	...	೬೫,೬೨,೪೯೪–೦೦

1980-81

ಉತ್ಪನ್ನ

೧.	ಬೀಟಿ	...	೧೨,೫೭೭ ಘನ ಮೀಟರ್
೨.	ತೇಗಂ	...	೭೩,೧೪೦ ಡಿಟೊ
೩.	ಇತರ ಜಾತಿಯ ಮರಗಳಂ	...	೪,೬೨,೩೦೪ ಡಿಟೊ
೪.	ಕೊಯ್ವಮರಗಳಂ	...	೧೦,೮೦೫ ಡಿಟೊ
೫.	ಕಂಬಗಳು	...	೧,೨೪,೨೦೧ ಡಿಟೊ
೬.	ಉರುವಲು ಕಟ್ಟಿಗೆ	...	೧೦,೬೯,೫೨೩ ಡಿಟೊ
೭.	ಬೊಂಬು	...	೧,೪೩,೬೦೬ ಟನ್‌ಗಳು

ಆದಾಯ

			(ರೂಪಾಯಿಗಳಲ್ಲಿ)
೧.	ನಾಟ	...	೨೪,೧೭,೯೬,೫೯-೦೦
೨.	ಉರುವಲು ಕಟ್ಟಿಗೆ ಮತ್ತು ಇದ್ದಲು		೫.೮೪,೭೨,೭೨೧-೦೦
೩.	ಬೊಂಬುಗಳಂ	...	೩೮,೭೮,೫೩೭-೦೦

1985-86 (ತಾತ್ಕಾಲಿಕ)

ಉತ್ಪನ್ನ

೧.	ತೇಗಂ	...	೧೧,೬೨೩.೫೧೨ ಘನ ಮೀಟರ್
೨.	ಇತರ ಜಾತಿಯ ಮರ	...	೩,೨೯,೦೫೭.೫೧೧ ಡಿಟೊ
೩.	ಸ್ಲೀಪರ್‌ಗಳು	...	೧೭೮.೨೩೬ ಡಿಟೊ
೪.	ಉರುವಲು ಕಟ್ಟಿಗೆ	...	೩,೩೬,೫೦೨.೯೧೪ ಡಿಟೊ
೫.	ಬಿದಿರಂ	...	೫೩,೧೮೧.೦೨೨ ಟನ್ನುಗಳು

ಆದಾಯಂ

1985-86

			ರೂ.
೧.	ಕೌಬಿನೇ	...	೪೪,೭೬,೮೫,೯೨೬-೦೦
೨.	ಉರುವಲು ಕಟ್ಟಿಗ ಮಂತಪ್ಪ ಇದ್ದಿಲು		೩,೦೮,೧೩,೨೫೭-೦೦
೩.	ಬಿದಿರು	...	೯೫,೧೧,೪೨೩-೦೦

ಸೇಂಗಾ ಅರಿದು ಎಣ್ಣೆ ತೆಗೆಯುವ ಯಂತ್ರಗಳ ಬಗ್ಗೆ

೮೩೪. ಶ್ರೀ ಚಂದ್ರಕಾಂತ್ ಬೆಲ್ಲದ್ (ಧಾರವಾಡ).— ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿಯ ಸೇಂಗಾ ಅರೆದು ಎಣ್ಣೆ ತೆಗೆಯುವ ಯಂತ್ರ ಚಾಲಿತ ಎಕ್ಸ್‌ಪೆಲ್ಲರಂಗಳ ಸಂಖ್ಯೆ ಎಷ್ಟು ; ಹಾಗೂ ಜಿಲ್ಲಾವಾರು ತಾಲ್ಲೂಕುವಾರು ಸಂಖ್ಯೆ ನೀಡುವುದು ;

ಆ) ರಾಜ್ಯದಲ್ಲಿ ಖಾದಿ ಗ್ರಾಮೋದ್ಯೋಗ ಮಂಡಲಿಯಿಂದ ಗುಡಿ ಕೈಗಾರಿಕೆಗಳೆಂದು ಸೇಂಗಾ ಅಥವಾ ಎಣ್ಣೆ ಕಾಳು ಅರೆಯುವ ಚಿಕ್ಕ ಗಾಣಗಳ ಸಂಖ್ಯೆ ಎಷ್ಟು ; ಇವುಗಳ ಸಂಖ್ಯೆಯನ್ನು ಜಿಲ್ಲಾ ಹಾಗೂ ತಾಲ್ಲೂಕುವಾರು ನೀಡುವುದು ?